# ನನ್ನ ಅಪ್ಪ ನನಗೆ ಮಾದರಿ



## ವಿವೇಕ್ ಸಿಂಹ ಜೆ

ಝೀ ಕನ್ನಡದ 'ಜನುಮದ ಜೋಡಿ'ಯ ಸಂಜು

★ *ಎರಡು ಪಾತ್ರದ ನಿರ್ವಹಣೆ ಕಿರಿಕಿರಿ ಅಲ್ವಾ?*

ಪೂರ್ವ ಜನ್ಮದಲ್ಲಿ ಆದಿತ್ಯ, ಈ ಜನ್ಮದಲ್ಲಿ ಸಂಜು. ವಸುಂಧರಾಗೂ ನಾನು ಪೂರ್ವ ಜನ್ಮದಲ್ಲಿ ರಾಜಸ್ತಾನದಲ್ಲಿ ಹುಟ್ಟಿರುತ್ತೇವೆ. ಈಗ ನಮಗಿಬ್ಬರಿಗೂ ಏಕರೀತಿಯ ಕನವರಿಕೆ ಕನಸುಗಳು ಕಾಣುತ್ತಿವೆ. ಇದು ನಮ್ಮ ಅವಿನಾಭಾವದ ಸಂಬಂಧಕ್ಕೆ ಸೆಳೆಯುತ್ತಿದೆ. ಭಿನ್ನ ಪಾತ್ರ ಅಂತ ಏನೂ ಅನ್ನಿಸೋದಿಲ್ಲ.

★ *ರಂಗದಿಂದ ಟಿವಿವರೆಗೆ ನಡೆದ ಹಾದಿ ಹೇಗಿದೆ?*

ನೀನಾಸಂನಲ್ಲಿ ರಂಗ ತರಬೇತಿ ಪಡೆಯುವ ಆಸಕ್ತಿ ಇತ್ತು. ಅಲ್ಲಿ ನನಗೆ ಅವಕಾಶ ಸಿಗಲಿಲ್ಲ. ಅವತ್ತೇ ರಾತ್ರಿ ಹೆಗ್ಗೋಡಿನಿಂದ ಮೈಸೂರಿಗೆ ಪ್ರಯಾಣ ಮಾಡಿ ರಂಗಾಯಣಕ್ಕೆ ಬಂದೆ. ಅಲ್ಲಿ ಅವಕಾಶ ಪಡೆದೆ. ಅದಾದ ಮೇಲೆ ಇಪ್ಪತ್ತೈದರಿಂದ ಮೂವತ್ತು ನಾಟಕಗಳಲ್ಲಿ ನಟಿಸಿದ್ದೇನೆ. ಸುಮಾರು ಎರಡು ಸಾವಿರಕ್ಕೂ ಹೆಚ್ಚು ಪ್ರದರ್ಶನಗಳಲ್ಲಿ ಬಣ್ಣ ಹಚ್ಚಿದ್ದೇನೆ. ಹೀಗಿದ್ದವನಿಗೆ 'ಸೌಭಾಗ್ಯವತಿ'ಯಲ್ಲಿ ಮೊದಲು ಅವಕಾಶ ಸಿಕ್ಕಿತು. ಇದು ಎರಡನೆಯದು. ನನಗೆ ನಟನೆ ಬಿಟ್ಟು ಬೇರೆ ಇನ್ನೇನೂ ಗೊತ್ತಿಲ್ಲ. ಇಲ್ಲೇ ಸಾಗುತ್ತೇನೆ. ಸಿನಿಮಾ ಮಾಡುವ ಕನಸೂ ಇದೆ. ಒಟ್ಟಾರೆ ಭಾಷೆ, ಭಾವ, ಭಂಗಿಯನ್ನು ತಿದ್ದಿ ನನಗೊಂದು ನಟನಾ ಕಲೆಯನ್ನು ತುಂಬಿದ್ದು ರಂಗಾಯಣ.

★ *ನಟನೆಯತ್ತ ಆಕರ್ಷಣೆ ಬಂದಿದ್ದು ಹೇಗೆ?*

ಬಾಲ್ಯದಲ್ಲಿ ತಮಟೆ ಹೊಡೆತಕ್ಕೆ ಡಾನ್ಸ್ ಮಾಡುತ್ತಿದ್ದವ ನಾನು. ಕ್ರಮೇಣ ವಿವಿಧ ಡಾನ್ಸ್‌ನ ಪಟ್ಟುಗಳನ್ನು ಕಲಿತೆ. ಕಾಲೇಜು ದಿನಗಳಲ್ಲಿ ಡೊಳ್ಳು ಕುಣಿತ ಸೇರಿದಂತೆ ಅನೇಕ ಜನಪದ ನೃತ್ಯಗಳಲ್ಲಿ ಭಾಗವಹಿಸುತ್ತಿದ್ದೆ. ಆಗಲೇ ಕಾಲೇಜು ರಂಗಭೂಮಿಯ ಪರಿಚಯವೂ ಆಯಿತು. ಕಾಲೇಜಿನ ತರಗತಿಗಳಿಗಿಂತಲೂ ನಾಟಕ– ನೃತ್ಯಗಳ ತಾಲೀಮು ಹೆಚ್ಚು ಆಕರ್ಷಕವಾದವು.

★ *ಒಳ್ಳೆಯ ನಟ ಅಂದರೆ ಏನು?*

ಅದು ನಟನ ಒಟ್ಟಾರೆ ಬದುಕನ್ನು ಪ್ರತಿನಿಧಿಸುತ್ತದೆ. ಸ್ಕ್ರೀನ್‌ನಿಂದ ಹೊರತಾಗಿಯೂ ಚೊಕ್ಕ ಬದುಕು ಇರಬೇಕು. ಮುಗ್ದತೆಯನ್ನು ಕಾಪಾಡಿಕೊಳ್ಳಬೇಕು. ನಟನೆಯಲ್ಲೇ ಆಗಲಿ, ನಿಜ ಬದುಕಿನಲ್ಲಿಯೇ ಆಗಲಿ ತನ್ನ ಕ್ರಿಯೆಯ ಬಗ್ಗೆ ಪ್ರಜ್ಞೆ ಇರಬೇಕು. ಸಿಕ್ಕ ಒಂದು ಅವಕಾಶದಲ್ಲಿ ಪ್ರೇಕ್ಷಕರ ಮನ ಗೆಲ್ಲುವಂತಹ ಪ್ರದರ್ಶನ ನೀಡಬೇಕು. ಪಾತ್ರ ಯಾವುದೇ ಇರಲಿ ಅದಕ್ಕೊಂದು ಜೀವ ತುಂಬಿ ಅದರ ಅನನ್ಯತೆಯನ್ನು ಸ್ಥಾಪಿಸುವುದು ಒಬ್ಬ ಒಳ್ಳೆಯ ನಟನ ಲಕ್ಷಣ. ಹಾಗೆಂದು ಅವನೇ ಪರಿಪೂರ್ಣ ಎಂದು ಅರ್ಥವಲ್ಲ. ನಟನೆ ಎಂದ ಮಾತ್ರಕ್ಕೆ ನಾಯಕ ನಟನಾಗಿಯೇ ಕಾಣಿಸಿಕೊಳ್ಳಬೇಕು ಎಂದೂ ಅಲ್ಲ ಎಂದು ನಾನು ಅಂದುಕೊಂಡಿದ್ದೇನೆ.

★ *ನಿಮ್ಮಗೆ ಪ್ರೇರಣೆ ಯಾರು?*

ನನ್ನ ಅಪ್ಪನೇ ನನ್ನ ಮೊದಲ ಹೀರೋ. ನಮ್ಮ ಅಪ್ಪ ಜಯಸಿಂಹ ಬೆಂಗಳೂರಿನಲ್ಲಿ ಆಟೋ ಓಡಿಸುತ್ತಾರೆ. ಅಮ್ಮ ಸರಸ್ವತಿ, ಆಕೆ ಗೃಹಿಣಿ. ಹುಟ್ಟಿದ್ದು ಮಲ್ಲೇಶ್ವರದ ಒಂದು ಮನೆ ಬೆಳೆದದ್ದು ಹತ್ತಾರು ಮನೆ. ಸಣ್ಣ ಸಣ್ಣ ಬಾಡಿಗೆ ಮನೆಗಳು ಏನೇನೋ ಕಾರಣಗಳಿಗೆ ಮನೆ ಬದಲಾವಣೆ. ಹೀಗಾಗಿ ನಾನು 10ನೇ ತರಗತಿ ಪಾಸ್ ಆಗುವಷ್ಟರಲ್ಲಿ ಆರೇಳು ಶಾಲೆಗಳಲ್ಲಿ ಅಲೆದಾಡಿದ್ದೆ. ಈಗ ಮಲ್ಲೆಶ್ವರಂನಲ್ಲೇ ಅನುಕೂಲಕರ ಮನೆಯನ್ನು ಮಾಡಿಕೊಂಡಿದ್ದೇವೆ.

ನನ್ನ ಅಪ್ಪ ನನ್ನ ಬಹುತೇಕ ನಾಟಕಗಳನ್ನು ನೋಡಿದ್ದಾರೆ. ರಾತ್ರಿ ಮನೆಗೆ ಬಂದ ತಕ್ಷಣ ನನ್ನ ಅಭಿನಯದ ವಿಮರ್ಶೆಯನ್ನು ಅಪ್ಪ ಮಾಡುತ್ತಿದ್ದರು. ತಪ್ಪುಗಳನ್ನು ಗುರುತಿಸಿ ಚೆನ್ನಾಗಿ ಮಾಡುವ ಬಗ್ಗೆ ತಿಳಿಹೇಳುತ್ತಿದ್ದರು. ಈಗಲೂ ಟಿವಿಯಲ್ಲಿ ನೋಡುತ್ತಾರೆ. ಟೀಕೆ– ಟಿಪ್ಪಣಿಗಳನ್ನು ಮಾಡುತ್ತಾರೆ. ಅಷ್ಟೆಲ್ಲಾ ಬಡತನದ ನಡುವೆ ನಮ್ಮ ಅಪ್ಪ ನನ್ನ ಆಸಕ್ತಿಯನ್ನು ಪ್ರೋತ್ಸಾಹಿಸಿದರು.

★ *ಟಿವಿಯಲ್ಲಿ ಹೇಗಿದೆ ನಿಮ್ಮ ಜೀವನ?*

ಆತಂಕ ಇದ್ದೇ ಇದೆ. ಯಾವತ್ತು ಬೇಡ ಅನ್ನುತ್ತಾರೋ ಎನ್ನುವ ಅತಂತ್ರ ನನ್ನನ್ನು ಕಾಡುತ್ತದೆ. ನಟನೇ ಆಗಬೇಕು ಎನ್ನುವುದು ನನ್ನ ಹಂಬಲ. ಸಿಕ್ಕ ಅವಕಾಶ ತಪ್ಪಬಾರದು ಎಂದು ಎಲ್ಲದಕ್ಕೂ ಹೊಂದಿಕೊಳ್ಳುತ್ತೇನೆ. ನಮಗೆ ಹಣದ ಅವಶ್ಯಕತೆ ತುಂಬಾನೇ ಇದೆ. ಹೀಗಿದ್ದೂ ಸಂಭಾವನೆ ವಿಷಯದಲ್ಲಿ ಕೆಲವೊಮ್ಮೆ ಹೆಚ್ಚುಕಡಿಮೆಯಾಗುತ್ತದೆ. ಇದೆಲ್ಲವನ್ನು ತಲೆಕೆಡಿಸಿಕೊಳ್ಳುವುದಿಲ್ಲ. ನಟನೆಯನ್ನು ಹೊರತು ಬೇರೆ ಏನನ್ನೂ ಯೋಚಿಸುವುದಿಲ್ಲ.

★ *ಪ್ರೀತಿ.. ಪ್ರೇಮ.. ನಡೀತಿದೆಯಾ?*

ಅದು ಆನ್ ಸ್ಕ್ರೀನ್. ಉಳಿದಂತೆ ಪಕ್ಕಾ ಜಾಗರೂಕನಾಗಿದ್ದೇನೆ. ಸುಮಾರು ಹುಡುಗಿಯರು ತಮ್ಮ ಪ್ರೇಮವನ್ನು ವ್ಯಕ್ತಪಡಿಸಿದ್ದಾರೆ. ನಾನು ಈ ವಿಷಯದಲ್ಲಿ ಬುದ್ಧಿವಂತ. ಮುಂದಿನ ಪರಿಣಾಮಗಳ ಬಗ್ಗೆ ತುಂಬಾ ಯೋಚಿಸುತ್ತೇನೆ. ಎಲ್ಲದಕ್ಕೂ ಸಮಯ ಎಂಬುದು ಇದ್ದೇ ಇದೆ. ಅಂತಹ ದಿನಗಳನ್ನು ಬಂದಾಗ ನೋಡಿದರಾಯಿತು.

■ ರಾಗು